ಶ್ರೀ ಚಂದ್ರಕಾಂತ ಗುರಪ್ಪ ಬೆಲ್ಲದ್ :— ಸರ್ಕ್ಯೂಟ್ ಬೆಂಚನ್ನಾದರೂ ಮಾಡುತ್ತೇವೆಂಬ ಆಶ್ವಾಸನೆ ಕೊಡಬೇಕು.

ಶ್ರೀ ಎಸ್.ಎಸ್. ಪಾಟೀಲ್ :— ಆ ರೀತಿ ಆಶ್ವಾಸನೆ ಕೊಡುವುದಕ್ಕಾಗುವುದಿಲ್ಲ. ಅದು ನಮ್ಮ ಕೈಯಲ್ಲಿಲ್ಲ. ಸರ್ಕಾರದ ಕೈಯಲ್ಲಿ ಅಧಿಕಾರವಿದ್ದರೆ ನಾಳೆಯೇ ಮಾಡುತ್ತೇವೆ. ಆದುದರಿಂದ, ಸರ್ಕಾರದ ಪರವಾಗಿ ಈ ಸದನದ ಮೂಲಕ ನಾವು ವಕೀಲರ ಸಂಘದವರನ್ನು ಹಾಗೂ ಅಲ್ಲಿ ಅಮರಣಾಂತ ಉಪವಾಸ ಕುಳಿತಿರುವವರಲ್ಲಿ ವಿನಂತಿಸಿಕೊಳ್ಳುವುದೇನೆಂದರೆ, ಅಲ್ಲಿ ಹೈಕೋರ್ಟ್ ಪೀಠ ಸ್ಥಾಪಿಸುವ ದಿಸೆಯಲ್ಲಿ ನಾವು ಎಲ್ಲಾ ರೀತಿಯ ಪ್ರಾಮಾಣಿಕ ಪ್ರಯತ್ನ ಮಾಡುತ್ತೇವೆ. ದಯವಿಟ್ಟು ಆಮರಣಾಂತ ಉಪವಾಸ ಸತ್ಯಾಗ್ರಹವನ್ನು ಹಿಂದಕ್ಕೆ ತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

(ಈ ಹಂತದಲ್ಲಿ ಮಾನ್ಯ ಸದಸ್ಯರುಗಳಾದ ಶ್ರೀ ಬೆಲ್ಲದ್ ಚಂದ್ರಕಾಂತ ಗುರಪ್ಪ, ಶ್ರೀ ಅಶೋಕ ಕಾಟ್ವೆ ಹಾಗೂ ಶ್ರೀ ಮಂಜುನಾಥ ಸಿ. ಕುನ್ನೂರ್, ಇವರುಗಳು ಸದನದ ಬಾವಿಯಲ್ಲಿ ಬಂದು ನಿಂತು ಸರ್ಕ್ಯೂಟ್ ಬೆಂಚ್ ಮಾಡಬೇಕು ಎಂದು ಒಕ್ಕೊರಲಿನಿಂದ ಕೂಗುತ್ತಿದ್ದರು)

ಶ್ರೀ ಎಸ್.ಎಸ್. ಪಾಟೀಲ್ :— ಸರ್ಕ್ಯೂಟ್ ಬೆಂಚ್ ಮಾಡುವಂಥ ಅಧಿಕಾರ ಸರ್ಕಾರಕ್ಕಿದ್ದರೆ ಖಂಡಿತವಾಗಿಯೂ ಪ್ರಾರಂಭ ಮಾಡುತ್ತೇವೆ.

(ಈ ಹಂತದಲ್ಲಿ ಸದನದ ಬಾವಿಯಲ್ಲಿ ಧರಣಿಯಲ್ಲಿ ನಿರತರಾಗಿದ್ದ ಮಾನ್ಯ ಸದಸ್ಯರುಗಳಾದ ಶ್ರೀ ಬೆಲ್ಲದ್ ಚಂದ್ರಕಾಂತ ಗುರಪ್ಪ, ಶ್ರೀ ಅಶೋಕ್ ಕಾಟ್ವೆ ಹಾಗೂ ಶ್ರೀ ಮಂಜುನಾಥ ಸಿ. ಕುನ್ನೂರ್ ಇವರುಗಳು ಧರಣಿ ಕೈಬಿಟ್ಟು ತಂತಮ್ಮ ಆಸನಗಳಿಗೆ ಮರಳಿದರು)

ಉಳ್ಳಾಲ ಕ್ಷೇತ್ರದ ತುಕ್ಕೋಟಿನ ಶ್ರೀಮತಿ ಫತೀಜಾಬಿ ಮಹಮದ್, ಮತ್ತಿತರು ಶಿವಮೊಗ್ಗದ ತಮ್ಮ ಸಂಬಂಧಿಕರ ಅಂತ್ಯ ಸಂಸ್ಕಾರದಲ್ಲಿ ಪಾಲ್ಗೊಳ್ಳಲು ತೆರಳಿ ವಾಪಸ್ ಬರುವಾಗ ಮಂಡಗದ್ದೆ ಬಳಿ ಅರಣ್ಯ ಸಿಬ್ಬಂದಿಗಳು ಗುಂಡು ಹಾರಿಸಿರುವುದು.

+ಶ್ರೀ ಕೆ. ಜಯರಾಮಶೆಟ್ಟಿ (ಉಳ್ಳಾಲ) :— ಮಾನ್ಯ ಛೇರ್ಮನ್‌ರವರೆ, ದಿನಾಂಕ 28-1-98 ರಂದು ನನ್ನ ಕ್ಷೇತ್ರದ ವ್ಯಾಪ್ತಿಗೆ ಸೇರುವ ತುಕ್ಕೋಟ್‌ನ ಶ್ರೀಮತಿ ಫತೀಜಾಬಿ ಮಹಮದ್, ಮಹಮದ್ ರಫಿ ಮತ್ತು ಮಹಮದ್ ಸಲೀಂ ಎಂಬುವವರು ಶಿವಮೊಗ್ಗದ ತಮ್ಮ ಸಂಬಂಧಿಕರ ಅಂತ್ಯ ಸಂಸ್ಕಾರ ಕಾರ್ಯದಲ್ಲಿ ಪಾಲ್ಗೊಳ್ಳಲು ತೆರಳಿ ವಾಪಸ್ಸು ಶಿವಮೊಗ್ಗ ತಮ್ಮ ಸಂಬಂಧಿಕರ ಅಂತ್ಯ ಸಂಸ್ಕಾರ ಕಾರ್ಯದಲ್ಲಿ ಪಾಲ್ಗೊಳ್ಳಲು ತೆರಳಿ ವಾಪಸ್ಸು ಶಿವಮೊಗ್ಗ ಜಿಲ್ಲೆಯ ಮಂಡಗದ್ದೆ ಬಳಿ ಬರುತ್ತಿರುವಾಗ ಅರಣ್ಯ ಸಿಬ್ಬಂದಿಗಳು ಯಾವುದೋ ವಿಚಾರದ ಸಂಬಂಧವಾಗಿ ಅನಪೇಕ್ಷಿತ ಇವರ ಮೇಲೆ ಗುಂಡು ಹಾರಿಸಿದ್ದರಿಂದ ಅವರು ತಮ್ಮ ಎರಡೂ ಕಣ್ಣುಗಳನ್ನು ಕಳೆದುಕೊಂಡಿರುವ ವಿಷಯವನ್ನು ಕಳೆದ ಅಧಿವೇಶನದ

ಸಮಯದಲ್ಲಿ ಗಮನಸೆಳೆಯುವ ಸೂಚನೆ ಮೂಲಕ ಉಲ್ಲೇಖಿಸಿದ್ದೆ. ಮಾನ್ಯ ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರಾದ ನಾಣಯ್ಯನವರು ಉತ್ತರ ಕೊಡುತ್ತಾ ಸರ್ಕಾರದಿಂದ ಲೋಪವಾಗಿದ್ದು ಅವರಿಗೆ ಸರ್ಕಾರದಿಂದ ಪೂರ್ಣ ಪ್ರಮಾಣದ ಪರಿಹಾರ ಕೊಡುತ್ತೇವೆ ಮತ್ತು ಔಷಧಿಗೆ ಎಷ್ಟು ಹಣ ಖರ್ಚಾಗಿದೆಯೋ ಅದೆಲ್ಲವನ್ನೂ ಕೊಡುತ್ತೇವೆಂಬ ಭರವಸೆ ನೀಡಿದ್ದರು. ಒಂದು ವರ್ಷ ಕಳೆದರೂ ಇದುವರೆವಿಗೂ ಯಾವುದೇ ಹಣ ಅವರಿಗೆ ಪಾವತಿಯಾಗಲಿಲ್ಲ. ಔಷಧಿಗಾಗಿ ಖರ್ಚು ಮಾಡಿದ 24,000 ರೂಪಾಯಿಗಳನ್ನು ಮಾತ್ರ ಕೊಟ್ಟಿದ್ದಾರೆ. ಮನೆಯಲ್ಲಿ ಬೀಡಿ ಕಟ್ಟಿ ಜೀವನೋಪಾಯ ಸಾಗಿಸುತ್ತಿದ್ದ ಆ ಮಹಿಳೆ ಇಂದು ತನ್ನ ಎರಡೂ ಕಣ್ಣುಗಳನ್ನು ಕಳೆದುಕೊಂಡಿರುವುದರಿಂದ ನಿತ್ಯದ ಕೆಲಸ ಮಾಡುವುದಕ್ಕಾಗದೆ ಬಹಳ ತೊಂದರೆಯಲ್ಲಿದ್ದಾರೆ. ನಾನು ಮೊನ್ನೆ ದಿವಸ ಅವರ ಮನೆಗೆ ಹೋದಂಥ ಸಂದರ್ಭದಲ್ಲಿ 'ನನಗೆ ನೀವು ಸರ್ಕಾರದಿಂದ ಯಾವುದೇ ಪರಿಹಾರ ದೊರಕಿಸಿಕೊಡುವುದು ಬೇಡ, ಕಳೆದುಕೊಂಡಿರುವ ಕಣ್ಣುಗಳನ್ನು ಸರ್ಕಾರದಿಂದ ನನಗೆ ಕೊಡಿಸಿಕೊಡಿ, ಅಷ್ಟೇ ಸಾಕು' ಎಂದರು. ನಾನು ಸರ್ಕಾರಕ್ಕೆ ಕೇಳುತ್ತಿರುವುದೇನೆಂದರೆ, ಆರ್ಥಿಕ ಇಲಾಖೆಯಿಂದ ಯಾವಾಗ ಕ್ಲಿಯರೆನ್ಸ್ ಬರುತ್ತದೆ? ಕ್ಲಿಯರೆನ್ಸ್ ಬರುವವರೆಗಾದರೂ ಏನಾದರೂ ಪರಿಹಾರ ಕೊಡುತ್ತೀರಾ? ಪರಿಹಾರ ಕೊಡದಿದ್ದರೆ ಅವರು ತಮ್ಮ ನಿತ್ಯ ಕಾಯಕದಲ್ಲಿ ತೊಡಗಿಕೊಳ್ಳಲು ನಿಮ್ಮ ಇಲಾಖೆಯ ಸಿಬ್ಬಂದಿಗಳ ಕಣ್ಣುಗಳನ್ನಾದರೂ ತೆಗೆದು ಅವರಿಗೆ ಕೊಡಿ, ಅಷ್ಟಾದರೆ, ಸಾಕು. ನೀವು ಪರಿಹಾರ ಕೊಡುವುದೇನೂ ಬೇಡ. ಪರಿಹಾರ ಕೊಡುವುದಿದ್ದರೆ ಯಾವಾಗ ಕೊಡುತ್ತೀರಿ? ಕಳೆದ ಸಲದ ಅಧಿವೇಶನದ ಸಂದರ್ಭದಲ್ಲೂ ಕೂಡ ಆ ತರಹದ್ದೇ ಉತ್ತರ ಕೊಟ್ಟಿದ್ದಾರೆ.

ಶ್ರೀ ಎಸ್.ಎಸ್. ಪಾಟೀಲ್ :— ಮಾನ್ಯ ಛೇರ್ಮನ್‌ರವರೆ, ಮಾನ್ಯ ಸದಸ್ಯರು ಮಾತನಾಡುತ್ತಾ ಯಾವ ವಿಚಾರವನ್ನು ಪ್ರಸ್ತಾಪಿಸಿದ್ದಾರೋ ಅದಕ್ಕೆ ಸಂಬಂಧಿಸಿದಂತೆ ಏನಾದರೂ ಪರಿಹಾರ ಕೊಡುವುದಾಗಿ ಈಗಾಗಲೇ ಸಂಬಂಧಪಟ್ಟ ಸಚಿವರು ಉತ್ತರ ಕೊಟ್ಟಿದ್ದರು. ಕಣ್ಣುಗಳನ್ನು ಕಳೆದುಕೊಂಡವರ ಔಷಧಿ ಖರ್ಚಿಗಾಗಿ ಈಗಾಗಲೇ 24,000 ರೂಪಾಯಿಗಳನ್ನು ಕೊಡಲಾಗಿದೆಯೆಂದು ಮಾನ್ಯ ಸದಸ್ಯರು ಹೇಳಿರುವುದರಿಂದ ಕಾಯ್ದೆಯಡಿ ಸರ್ಕಾರದಿಂದ ಅವರಿಗೆ ಎಷ್ಟು ಹಣಕಾಸಿನ ಸೌಲಭ್ಯ ಒದಗಿಸಿಕೊಡುವುದಕ್ಕೆ ಸಾಧ್ಯವಿದೆಯೋ ಅಷ್ಟನ್ನು ಕಲ್ಪಿಸಿಕೊಡುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ಕೆ. ಜಯರಾಮಶೆಟ್ಟಿ :— ಒಂದು ವರ್ಷ ಕಳೆಯಿತು, ಅವರು ಊಟ ಮಾಡುವುದು ಬೇಡವೇ? ಮನೆಯಲ್ಲಿ ಸುಮ್ಮನೆ ಕುಳಿತುಕೊಳ್ಳುವುದಕ್ಕಾಗುತ್ತದೆಯೇ? ಅವರಿಗೆ ಕಣ್ಣುಗಳಿಲ್ಲ, ತಮ್ಮ ಎರಡೂ ಕಣ್ಣುಗಳನ್ನು ಕಳೆದುಕೊಂಡಿರುವುದರಿಂದ ನಿಮ್ಮ ಇಲಾಖಾ ಸಿಬ್ಬಂದಿಯಿಂದ ಕಣ್ಣುಗಳನ್ನು ತೆಗೆದು ಅವರಿಗೆ ಕೊಟ್ಟುಬಿಡಿ. ಅವರು ಬೀಡಿ ಕಟ್ಟಿಕೊಂಡು ಜೀವನೋಪಾಯ ಮಾಡಲಿ. ನಾನು ಸರ್ಕಾರಕ್ಕೆ ಎರಡು ಸಲ ಈ ವಿಷಯವಾಗಿ ಕೇಳುತ್ತಿರುವುದರಿಂದ, ತಾವು ದಯವಿಟ್ಟು ಆ ವ್ಯವಸ್ಥೆಯನ್ನಾದರೂ ಮಾಡುತ್ತೀರಾ?

ಛೇರ್ಮನ್ :— ತಾವು ಸರ್ಕಾರದ ಗಮನ ಸೆಳೆದಿದ್ದೀರಿ, ಸಚಿವರು ಆ ಕುರಿತು ಕ್ರಮ ಕೈಗೊಳ್ಳುವುದಾಗಿ ಹೇಳಿರುವುದರಿಂದ ಇನ್ನು ಹೆಚ್ಚಿನ ಚರ್ಚೆ ಬೇಡ.

ಆ) ಕಮಲಾಪುರದಲ್ಲಿ ಗಂಡೋರಿ ನಾಲಾಯೋಜನೆ ಕುರಿತು.

ಶ್ರೀ ರೇವುನಾಯಕ್ ಬೆಳಮಗಿ (ಕಮಲಾಪುರ) :— ಸನ್ಮಾನ್ಯ ಛೇರ್ಮನ್‌ರವರೆ, ಗುಲ್ಬರ್ಗ ಜಿಲ್ಲೆಗೆ ಸೇರಿರುವ ನನ್ನ ಮತಕ್ಷೇತ್ರವಾದ ಕಮಲಾಪುರದಲ್ಲಿ ಗಂಡೋರಿ ನಾಲಾ ಯೋಜನೆಯನ್ನು ಕೈಗೆತ್ತಿಕೊಂಡಿದ್ದು, ಸದರಿ ಯೋಜನೆಗೆ ಸಂಬಂಧಿಸಿದಂತೆ ಸರ್ಕಾರ 1995-96 ರಲ್ಲಿ ಉತ್ತರ ಕೊಟ್ಟಿದ್ದು ಕ್ರಿ.ಶ. 2000 ಇಸವಿಯೊಳಗೆ ಯೋಜನೆ ಮುಗಿಸುವುದಾಗಿ ತಿಳಿಸಿತ್ತು. ಯೋಜನೆಯ ಕಾರ್ಯದ ಗುತ್ತಿಗೆ ವಹಿಸಿಕೊಂಡಿರುವ ಗುತ್ತಿಗೆದಾರರಿಗೆ ಕೊಡಬೇಕಾಗಿರುವ ಸುಮಾರು ಏಳು ಕೋಟಿ ರೂಪಾಯಿಗಳಷ್ಟು ಹಣ ಬಾಕಿ ಇರುವುದರಿಂದ ಆ ಹಣ ಪಾವತಿಯಾಗದಿರುವುದರಿಂದ ಅವರುಗಳು ಕಂಗಾಲಾಗಿದ್ದಾರೆ. ಕೆಲಸ ನಿಲ್ಲಿಸಿರುವುದರಿಂದ ಯೋಜನೆ ಬಹಳ ಕುಂಠಿತಗೊಂಡಿದೆ. ಕಮಲಾಪುರ ಕ್ಷೇತ್ರದಲ್ಲಿ ರೈತರ ಪರವಾಗಿರುವ ಗಂಡೋರಿ ನಾಲಾ ಪ್ರಾಜೆಕ್ಟ್ ಒಂದೇ ಇದ್ದು ಪ್ರಸಕ್ತವರ್ಷ ಇದಕ್ಕಾಗಿ ಐವತ್ತು ಕೋಟಿ ರೂಪಾಯಿಗಳನ್ನು ಕೊಡುವುದಾಗಿ ಮಾನ್ಯ ಸಚಿವರು ಗುಲ್ಬರ್ಗಾದಲ್ಲಿ ಪತ್ರಿಕೆಗಳಿಗೆ ಹೇಳಿಕೆ ನೀಡಿದ್ದಾರೆ. ಆದರೂ ಇದುವರೆವಿಗೂ ಒಂದು ಕೋಟಿ ರೂಪಾಯಿಯಷ್ಟು ಹಣ ಮಾತ್ರ ಬಿಡುಗಡೆಯಾಗಿದ್ದು, ಗುತ್ತಿಗೆದಾರರಿಗೆ ಪಾವತಿಸಬೇಕಾಗಿರುವ ಏಳು ಕೋಟಿ ರೂಪಾಯಿಗಳು ಬಾಕಿ ಇರುವುದರಿಂದ ಅವರುಗಳು ಕೆಲಸ ನಿಲ್ಲಿಸಿದ್ದು, ಹಣ ಬಾರದೆ ಕಂಗಾಲಾಗಿರುವುದರಿಂದ ಸರ್ಕಾರ ಇದರ ಬಗ್ಗೆ ಏನು ಕ್ರಮ ಕೈಗೊಳ್ಳುತ್ತದೆ? ಹಾಗೂ ಯೋಜನೆಯನ್ನು ಯಾವಾಗ ಮುಗಿಸುತ್ತೀರೆಂಬುದನ್ನು ತಿಳಿಸಬೇಕು.

ಶ್ರೀ ಕೆ.ಎನ್. ನಾಗೇಗೌಡ (ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು) :— ಮಾನ್ಯ ಛೇರ್ಮನ್‌ರವರೆ, ಗಂಡೋರಿ ನಾಲಾ ಸುಮಾರು 103 ಕೋಟಿ ರೂಪಾಯಿಗಳ ಯೋಜನೆಯಾಗಿದ್ದು ಎಂಟು ಸಾವಿರ ಹೆಕ್ಟೇರ್ ಪ್ರದೇಶಕ್ಕೆ ನೀರು ಕೊಡಲು ಉದ್ದೇಶಿಸಲಾಗಿದೆ. ಮಾನ್ಯ ಸದಸ್ಯರು ಹೇಳಿರುವಂತೆ ನಮ್ಮ ಸರ್ಕಾರ ಅಧಿಕಾರಕ್ಕೆ ಬಂದ ನಂತರ ಈ ಯೋಜನೆಯನ್ನು ಕೈಗೆತ್ತಿಕೊಂಡಿದ್ದು ಇದುವರೆವಿಗೂ ಸುಮಾರು 21 ಕೋಟಿ ರೂಪಾಯಿಗಳಷ್ಟು ಹಣವನ್ನು ಖರ್ಚು ಮಾಡಲಾಗಿದೆ. ಇದರಲ್ಲಿ ಕ್ರಿಟಿಕಲ್ ವರ್ಕ್ಸ್ ಇದ್ದು ಕ್ರಿ.ಶ. 2000 ಇಸವಿಯೊಳಗೆ ಮುಗಿಯುತ್ತದೆ. ಇದಕ್ಕಾಗಿ 50 ಕೋಟಿ ರೂಪಾಯಿಗಳು ಬೇಕಾಗುವುದರಿಂದ ಈ ಕುರಿತು ಮಾಯ ಮುಖ್ಯಮಂತ್ರಿಗಳ ಹತ್ತಿರ ಚರ್ಚಿಸಿದ್ದು ಸದರಿ ಯೋಜನೆಯನ್ನು ಹೊಸದಾಗಿ ರಚನೆಯಾಗುವ ಕರ್ನಾಟಕ ನೀರಾವರಿ ನಿಗಮದಡಿ ತೆಗೆದುಕೊಳ್ಳಬೇಕೆನ್ನುವ ಒಂದು ಯೋಚನೆ ಇದೆ. ಎರಡನೆಯದಾಗಿ, ಭಾರತ ಸರ್ಕಾರದವರು ಎ.ಐ.ಡಿ.ಪಿ.ಯಡಿ ಶೇಷ 50 ರಷ್ಟು ಸಾಲ ಕೊಡುತ್ತಿದ್ದು ಈ ಯೋಜನೆಯಡಿ ಗಂಡೋರಿ ನಾಲಾ ಯೋಜನೆಯನ್ನು ತೆಗೆದುಕೊಳ್ಳಬೇಕೆಂದು ಯೋಚಿಸಿದ್ದೇವೆ. ಇನ್ನೊಂದು ವಾರದಲ್ಲಿ ಈ ಕುರಿತು ತೀರ್ಮಾನ ಮಾಡಲಿದ್ದೇವೆ. ಇವೊತ್ತು ಸಂಜೆ 5.00 ಗಂಟೆಗೆ ಈ ಕುರಿತು